ಶ್ರೀಬಿ.ಎಸ್. ಯಡಿಯೂರಪ್ಪ :- ಸನ್ಮಾನ್ಯ ಅಧ್ಯಕ್ಷರೆ ''ಶಿರಾಳಕೊಪ್ಪ''ದಲ್ಲಿ ಕುಡಿಯುವ ನೀರಿನ ಸಮಸ್ಯೆ ಬಹಳ ಇದೆ. ಹಿಂದೆ ಸಚಿವರಾಗಿದ್ದ ಮಾನ್ಯ ಘೋರ್ಪಡೆಯವರು ಅದನ್ನು ಉದ್ಘಾಟನೆ ಮಾಡಿ ಹೋಗಿದ್ದರು. ಒಂದು ವರ್ಷವಾಗಿದೆ. ಸ್ವಲ್ಪ ಎಸ್ಟಿಮೇಟ್ ರಿವೈಸ್ ಆಗಿರುವುದರಿಂದ ಕಾಸ್ಟ್ ಜಾಸ್ತಿಯಾಗಿದೆ. ಮಾರ್ಚ್ 31ರೊಳಗೆ ಅದಕ್ಕೆ ಮಂಜೂರಾತಿ ಕೊಟ್ಟು ಕೆಲಸ ಪ್ರಾರಂಭ ಮಾಡಿಸುತ್ತೀರೋ?

ಶ್ರೀ. ಎಂ.ಪಿ. ಪ್ರಕಾಶ ಸನ್ಮಾನ್ಯ ಅಧ್ಯಕ್ಷರೆ, ''ಶಿರಾಳಕೊಪ್ಪ''ದಲ್ಲಿ ಕುಡಿಯುವ ನೀರಿನ ಸಮಸ್ಯೆ ಬಹಳ ಇದೆ. ಅಲ್ಲಿನ 12 ಕೊಳಚೆ ಬಾವಿಗಳಲ್ಲಿ 70 ಲೀಟರ್‌ನಷ್ಟು ನೀರನ್ನು ಪ್ರತಿಶತ ಪ್ರತಿಯೊಬ್ಬ ವ್ಯಕ್ತಿಗೂ ಕೊಡಬೇಕು ಎನ್ನ ತಕ್ಕ ಕಾರಣದಿಂದ ಅದು ಪುನರ್ ವಿರ್ಮಶಕ ಅಂದಾಜಿನ ಪ್ರಕಾರ 32 ಪ್ರಕಾರ 32 ಲಕ್ಷ ರೂಪಾಯಿಗಳಾಗಿದೆ. ಈಗಾಗಲೇ 11 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಲಾಗಿದೆ. ಅದರ ಆಡಳಾತಾತ್ಮಕ ಮಂಜುರಾತಿ ಬರೆ ತಾಂತ್ರಿಕವಾದುದು, ಅದನ್ನು ಕೊಡುವುದರಲ್ಲಿ ಸ್ವಲ್ಪ ವಿಳಂಬವಾಗಿದೆ. ಪುನರ್‌ವಿರ್ಮಶಕ ಅಂದಾಜುಪಟ್ಟಿಯ ಕಾರಣಕ್ಕಾಗಿ ಅನುಮತಿಯನ್ನು ಕೊಡುವಲ್ಲಿ ವಿಳಂಬವಾಗಿದೆ. ಆದರೆ ಹಣವಿಲ್ಲವೆನ್ನ ತಕ್ಕ ಪ್ರಶ್ನೆಯಲ್ಲ, ಈಗಾಗಲೆ 11 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ, ಉಳಿದಿರತಕ್ಕ 21 ಲಕ್ಷ ರೂಪಾಯಿಗಳನ್ನು ಖರ್ಚು ಮಾಡುವುದಕ್ಕೆ ಹಣವನ್ನು ಬಿಡುಗಡೆ ಮಾಡುತ್ತೇವೆ.

ವಿಷಯ :- ಪುತ್ತೂರಿನ ಬೈಪಾಸ್ ರಸ್ತೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 64 (477)

ಶ್ರೀ ಡಿ.ವಿ. ಸದಾನಂದ ಗೌಡ (ಪುತ್ತೂರು):

ಮಾನ್ಯ : ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ.

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿನ ಪುತ್ತೂರು ನಗರದ 'ಬೈಪಾಸ್' ರಸ್ತೆ ನಿರ್ಮಾಣದ ಅಂದಾಜು ವೆಚ್ಚ ಎಷ್ಟು:

ಆ) ಹಾಗೂ ಈ ಕಾಮಗಾರಿಯು ಪೂರ್ಣಗೊಳಿಸಲಾಯಿತೆ ಹಾಗಿಲ್ಲದಿದ್ದಲ್ಲಿ ಅದನ್ನು ಎಂದು ಮುಗಿಸಲಾಗುವುದು?

ಶ್ರೀ ಶಿವಾನಂದ ಎಚ್. ಕೌಜಲಗಿ
(ಲೋಕೋಪಯೋಗಿ ಸಚಿವರು).

ಅ) 85.00 ಲಕ್ಷ ರೂ.ಗಳು

ಆ) ಕಾಮಗಾರಿಯು ಪ್ರಗತಿಯಲ್ಲಿದೆ. ಕಾಮಗಾರಿಯನ್ನು ಕರಾರಿನಂತೆ 15-11-1996ರ ಒಳಗೆ ಪೂರ್ಣಗೊಳಿಸಬೇಕಿರುತ್ತದೆ. ಪ್ರಸಕ್ತ ಒಬ್ಬರು ಭೂಮಾಲಿಕರು ಭೂಸ್ವಾಧೀನ ಪರಿಹಾರದ

ಬಗ್ಗೆ ಭಾಗ: ಉದ್ದಕ್ಕೆ ನ್ಯಾಯಾಲಯದಿಂದ ತಡೆ ಆಜ್ಞೆ ತಂದಿದ್ದು ಕಾಮಗಾರಿಯ ಪ್ರಗತಿಯಲ್ಲಿ ಸ್ವಲ್ಪ ಕುಂಠಿತವಾಗಿದೆ.

ಶ್ರೀ ಡಿ.ವಿ. ಸದಾನಂದ ಗೌಡ :- ಸನ್ಮಾನ್ಯ ಅಧ್ಯಕ್ಷರೆ, ಈ ಬೈಪಾಸ್ ರಸ್ತೆಯಲ್ಲಿ ಎಷ್ಟು ಸೇತುವೆಗಳಿವೆ? ಅದರ ಅಂದಾಜು ತಯಾರಾಗಿದೆಯೇ? ತಯಾರಾಗಿದ್ದರೆ ಟೆಂಡರ್ ಆಗಿದೆಯೆ? ಅದು ಯಾವ ಹಂತದಲ್ಲಿದೆ? ಎರಡನೆಯದಾಗಿ ಸರ್ಕಾರಕ್ಕೆ ಈಗಾಗಲೇ ಪತ್ರವನ್ನು ಬರೆದ ಪ್ರಕಾರ ಎರಡನೆಯ ಹಂತದ ಕಾಮಗಾರಿಗೆ ಹೆಚ್ಚುವರಿಯಾಗಿ 20 ಲಕ್ಷ ರೂಪಾಯಿಗಳನ್ನು, ಮೂರನೆಯ ಹಂತದ ಕಾಮಗಾರಿಗಾಗಿ 30 ಲಕ್ಷ ರೂಪಾಯಿಗಳನ್ನು ಹೆಚ್ಚುವರಿಯಾಗಿ ಕೇಳಲಾಗಿದೆ. ಸರ್ಕಾರ ಇದರ ಬಗ್ಗೆ ಏನು ಕ್ರಮತೆಗೆದುಕೊಂಡಿದೆ? ಮೂರನೆಯದಾಗಿ ಭೂಸ್ವಾಧೀನ ಪ್ರಕರಣಕ್ಕೆ ಸಂಬಂಧಪಟ್ಟಂತೆ ಹಣವನ್ನು ಪಾವತಿ ಮಾಡುವ ಸಲುವಾಗಿ ಎ.ಸಿ. ಕಛೇರಿಯಿಂದ ಸಾಮಾನುಗಳನ್ನೂ ಸಹ ಜಪ್ತಿಯಾದ ವಿಚಾರ ಪತ್ತೂರಿನ ಎಲ್ಲರ ಗಮನಕ್ಕೆ ಬಂದಿದೆ, ಸರ್ಕಾರ ಇದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದೆ? ಮತ್ತು ಈಗ ಯಾವುದಾದರೂ ದಾವೆಗಳು ಬಾಕಿ ಇದೆಯೆ? ಇದ್ದರೆ ಯಾವ ಹಂತದಲ್ಲಿದೆ?

ಶ್ರೀ ಶಿವಾನಂದ ಎಚ್. ಕೌಜಲಗಿ:- ಅಧ್ಯಕ್ಷರೆ, ಈಗಾಗಲೇ ಎರಡು ಹಂತಗಳಲ್ಲಿ ಕೆಲಸವನ್ನು ತೆಗೆದುಕೊಳ್ಳಲಾಗುತ್ತಿದೆ. 0 ಇಂದ 2.50 ರವರೆಗೆ ಮತ್ತು 0.50 ರಿಂದ 4.12 ವರೆಗೆ. ಸುಮಾರು 60 ಲಕ್ಷ ರೂಪಾಯಿಗಳಿಗೆ ಮಂಜೂರಾತಿಯನ್ನು ಈಗಾಗಲೆ ಕೊಡಲಾಗಿದೆ. ಮೊದಲನೆಯ ಹಂತದ ಕಾಮಗಾರಿಯನ್ನು ಮುಗಿಸಲಾಗಿದೆ. ಎರಡನೆಯ ಹಂತದ ಕಾಮಗಾರಿಯನ್ನು ಮಾಡುವ ಕಾಲದಲ್ಲಿ ಒಬ್ಬರು ಕೋರ್ಟ್‌ನಿಂದ ಸ್ಟೇ ತಂದಿದ್ದಾರೆ. ಆಗ ಕೋರ್ಟ್‌ನವರು ನೀವು ಹೊಸದಾಗಿ ಅಕ್ವಿಜಿಷನ್ ಕ್ರಮವನ್ನು ಮಾಡಬೇಕೆಂದು ಸರ್ಕಾರಕ್ಕೆ ಆದೇಶ ಮಾಡಿದ್ದಾರೆ. ಆದರೆ ಅದು ಜರೂರಾದ ಕೆಲಸವೆಂದು ಅದನ್ನು ಸ್ವಾಧೀನ ಪಡಿಸಿಕೊಳ್ಳಬೇಕೆಂದು ಸರ್ಕಾರ ಈಗಾಗಲೆ ತೀರ್ಮಾನ ಮಾಡಿದೆ. ಅದಷ್ಟು ಬೇಗ ಆ ಸ್ಥಳವನ್ನು ಸ್ವಾಧೀನಪಡಿಸಿಕೊಂಡು ಕೆಲಸ ಮಾಡಲಾಗುವುದು.

ಶ್ರೀ. ಡಿ.ವಿ. ಸದಾನಂದ ಗೌಡ:- ಎರಡು ಮತ್ತು ಮೂರನೆಯ ಹಂತದ ಕಾಮಗಾರಿಗೆ ಹೆಚ್ಚುವರಿ ಅನುದಾನವನ್ನು ಕೇಳಿರುವ ಬಗ್ಗೆ ಸರ್ಕಾರದ ನಿಲುವೇನು? ಎರಡನೆಯ ಹಂತಕ್ಕೆ 20 ಲಕ್ಷ, ಮೂರನೆಯ ಹಂತಕ್ಕೆ 30 ಲಕ್ಷ ಹೆಚ್ಚುವರಿ ಅನುದಾನವನ್ನು ಕೇಳಿದೆ. ಇದರ ಬಗ್ಗೆ ಸರ್ಕಾರದ ನಿಲುವೇನು?

ಶ್ರೀ ಶಿವಾನಂದ ಎಚ್. ಕೌಜಲಗಿ:- ಈ ಕೆಲಸವನ್ನು ಮುಗಿಸಬೇಕೆಂದು ಸರ್ಕಾರ ನಿರ್ಣಯವನ್ನು ತೆಗೆದುಕೊಂಡಿದೆ. ಅದಕ್ಕೆ ಬೇಕಾದ ಹಣವನ್ನು ಆದ್ಯತೆಯ ಮೇಲೆ ಒದಗಿಸಲಾಗುವುದು ಮತ್ತು ಕ್ರಮತೆಗೆದುಕೊಳ್ಳಲಾಗುವುದು.

ಶ್ರೀ ಕೆ.ಎನ್. ನಾಗೇಗೌಡ:- ಸನ್ಮಾನ್ಯ ಅಧ್ಯಕ್ಷರೆ, ಬೈಪಾಸ್ ರಸ್ತೆಗಳ ಬಗ್ಗೆ 1971-72ರಲ್ಲಿ ರಾಜ್ಯದಲ್ಲಿ ಎಲ್ಲೆಲ್ಲಿ ನ್ಯಾಷನಲ್ ಹೈವೇ, ಸ್ಟೇಟ್ ಹೈವೇ ಬರುವ ಮ್ಯಾಪನ್ನು ಮಾಡಿದ್ದರು. ಅಂದು ಎಲ್ಲಾ ನಗರಗಳಿಗೆ ಬೈಪಾಸ್ ರಸ್ತೆಗಳನ್ನು ಮಾಡತಕ್ಕ ಮ್ಯಾಪನ್ನು ಮಾಡಿದ್ದರು. ಕೆಲವು ಕಡೆಗಳಲ್ಲಿ ಅದನ್ನು ಜಾರಿಗೆ ತಂದಿದ್ದಾರೆ, ಕೆಲವು ಕಡೆ ಮಾಡಿಲ್ಲ. ಇವತ್ತಿನ ದಿವಸ ಜನಸಂಖ್ಯೆ

ಹೆಚ್ಚಾಗಿ ಬೆಳೆಯುತ್ತಿರುವುದರಿಂದ ಮತ್ತು ವಾಹನಗಳ ಸಂಖ್ಯೆ ಜಾಸ್ತಿಯಾಗುತ್ತಿರುವುದರಿಂದ ಇದರ ಬಗ್ಗೆ ಒಂದು ಮಾಸ್ಟರ್ ಪ್ಲಾನ್ ಮಾಡಿ, ಬೈಪಾಸ್ ರೋಡ್‌ಗಳಿಗೆ ಆದ್ಯತೆಯನ್ನು ಕೊಟ್ಟು, ನಗರದಲ್ಲಿ ಬಸ್ಸು ಹೋದರು, ಮಕ್ಕಳಿಗೆ, ಜನರಿಗೆ ಸಾವು ನೋವು ಆಗಿ ತೊಂದರೆಯಾಗುತ್ತಿರುವುದರಿಂದ ಈ ಬೈಪಾಸ್ ರೋಡ್‌ಗಳಿಗೆ 4-5 ವರ್ಷದಲ್ಲಿ ಆ ಮ್ಯಾಪ್‌ನ ಪ್ರಕಾರ ಹೈವೇಯ ಹತ್ತಿರ ಬರತಕ್ಕ ನಗರಗಳಿಗೆ ಪ್ರಿಯಾರಿಟಿ ಕೊಡುತ್ತೀರ ಎನ್ನತಕ್ಕ ಬಗ್ಗೆ ಕೇಳಬಯಸುತ್ತೇನೆ.

ಶ್ರೀ ಶಿವಾನಂದ ಹೆಚ್. ಕೌಜಲಗಿ:- ಸಲಹೆ ಯೋಗ್ಯವಾಗಿದೆ, ಪರಿಶೀಲಿಸಲಾಗುವುದು.

ವಿಷಯ:- ಬಳಕೆದಾರರ ವೇದಿಕೆಗೆ ಅಧ್ಯಕ್ಷರ ನೇಮಕ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 65 (652)

ಶ್ರೀ ಯು.ಆರ್. ಸಭಾಪತಿ (ಉಡುಪಿ)

ಮಾನ್ಯ : ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ.

ಅ) ರಾಜ್ಯದಲ್ಲಿನ ಎಲ್ಲಾ ಜಿಲ್ಲಾ ಬಳಕೆದಾರರ ದೂರು ಪರಿಹಾರ ವೇದಿಕೆಗಳಿಗೆ ಅಧ್ಯಕ್ಷರುಗಳ ನೇಮಕವಾಗಿದೆಯೆ; ಇಲ್ಲದಿದ್ದಲ್ಲಿ, ಕಾರಣಗಳೇನು ಹಾಗೂ ಉಳಿದ ಅಧ್ಯಕ್ಷರುಗಳನ್ನು ಯಾವಾಗ ನೇಮಕ ಮಾಡಲಾಗುವುದು;

ಆ) ಇತ್ಯರ್ಥವಾಗದೇ ಬಾಕಿ ಇರುವ ಪ್ರಕರಣಗಳ ಸಂಖ್ಯೆ ಎಷ್ಟು? (ಜಿಲ್ಲಾವಾರು ಮಾಹಿತಿ ಒದಗಿಸುವುದು).

ಇ) ಈ ವೇದಿಕೆಗಳಿಗೆ ಸರ್ಕಾರದಿಂದ ನೇಮಕಗೊಂಡ ಸದಸ್ಯರುಗಳು ವಿಚಾರಣೆಯಲ್ಲಿ ಹಾಜರಾಗದೆ ಇರುವ ಕಾರಣಗಳಿಂದಾಗಿ ಪ್ರಕರಣಗಳ ಇತ್ಯರ್ಥಗಳು ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಬಂದಿದ್ದಲ್ಲಿ, ಈ ಬಗ್ಗೆ ಸರ್ಕಾರದವರು ತೆಗೆದುಕೊಂಡ ಕ್ರಮಗಳೇನು?

ಈ) ರಾಜ್ಯದಲ್ಲಿ ಬಳಕೆದಾರರ ರಕ್ಷಣಾ ಕಾಯ್ದೆಯ ಪ್ರಕಾರ ಬಳಕೆದಾರರ ರಕ್ಷಣ ಮಂಡಳಿಯನ್ನು ಸರ್ಕಾರದವರು ಸ್ಥಾಪಿಸುವ ವಿಚಾರದಲ್ಲಿ ತಳೆದಿರುವ ನಿಲುವು ಏನು?

ಶ್ರೀ. ಎಸ್. ನಂಜಪ್ಪ

ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು

ಅ) ಇಲ್ಲ, ಕೋಲಾರ, ಚಿತ್ರದುರ್ಗ, ದಕ್ಷಿಣ ಕನ್ನಡ, ಉತ್ತರ ಕನ್ನಡ ಮತ್ತು ಗುಲ್ಬರ್ಗಾ ಜಿಲ್ಲಾ ವೇದಿಕೆಗಳಿಗೆ ಅಧ್ಯಕ್ಷರನ್ನು ನೇಮಕ ಮಾಡುವ ವಿಷಯ ಸರ್ಕಾರದ ಪರಿಶೀಲನೆಯಲ್ಲಿದೆ. ಶೀಘ್ರವಾಗಿ ಈ ಹುದ್ದೆಗಳನ್ನು ತುಂಬಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಆ) ಅನುಬಂಧದಲ್ಲಿ ಕೊಡಲಾಗಿದೆ.